## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 969 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಹೆಚ್. ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3) | ಉತ್ತರಿಸಬೇಕಾದ ದಿನಾಂಕ | 15.12.2025 |
| 4) | ಉತ್ತರಿಸುವವರು | ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

<table>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ) ರಾಜ್ಯದಲ್ಲಿ ಉದ್ಯೋಗ ಪಡೆಯಲು ಬೇಕಾದ ಕೌಶಲ್ಯ ಹೊಂದಿರುವ ಯುವ ಜನರ ಸಂಖ್ಯೆ ಎಷ್ಟು;</td><td>ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ವತಿಯಿಂದ ಅಲ್ಪಾವಧಿ ಕೌಶಲ್ಯಾಧಾರಿತ ತರಬೇತಿ ಪಡೆದು ರಾಜ್ಯದಲ್ಲಿ ಉದ್ಯೋಗ ಪಡೆಯಲು ಬೇಕಾದ ಕೌಶಲ್ಯ ಹೊಂದಿರುವ ಯುವಜನರ ಸಂಖ್ಯೆ:2,34,492.<br><br>ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಮೂಲಕ ಅನುಷ್ಠಾನಗೊಳಿಸಲಾಗುತ್ತಿರುವ ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯಡಿ (DDU-GKY) 2013-14ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಉದ್ಯೋಗ ಪಡೆಯಲು ಬೇಕಾದ ಕೌಶಲ್ಯ ಹೊಂದಿದವರ ಸಂಖ್ಯೆ 57848.</td></tr>
<tr><td>(ಆ) ಬೆಂಗಳೂರು ನಗರ ಉದ್ಯೋಗ ಒದಗಿಸುವಲ್ಲಿ ಮುಂಚೂಣಿಯಲ್ಲಿದೆಯೇ; ಹಾಗಿದ್ದಲ್ಲಿ, ಕಳೆದ 3 ವರ್ಷಗಳಲ್ಲಿ ಎಷ್ಟು ಯುವ ಜನರು ಉದ್ಯೋಗಕ್ಕೆ ನೇಮಕಗೊಂಡಿದ್ದಾರೆ;</td><td>ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ವತಿಯಿಂದ ಕಳೆದ 3 ವರ್ಷಗಳಲ್ಲಿ ಬೆಂಗಳೂರು ನಗರದಲ್ಲಿ 49 ನೇರ ಸಂದರ್ಶನ/ಮಿನಿ ಉದ್ಯೋಗ ಮೇಳಗಳನ್ನು ಆಯೋಜಿಸಿದ್ದು, ಆ ಮೂಲಕ 1335 ನಿರುದ್ಯೋಗಿ ಯುವಕರಿಗೆ ಉದ್ಯೋಗ ಆಹ್ವಾನ ಪತ್ರ ನೀಡಲಾಗಿದೆ.<br><br>ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ವತಿಯಿಂದ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ ತರಬೇತಿ ಪಡೆದ 1094 ಅಭ್ಯರ್ಥಿಗಳು ಉದ್ಯೋಗಾವಕಾಶವನ್ನು ಪಡೆದಿದ್ದು, ನಿಗಮದಿಂದ ಕೈಗೊಳ್ಳಲಾದ ಉದ್ಯೋಗ ಮೇಳದ ಮುಖೇನ 10999 ಅಭ್ಯರ್ಥಿಗಳು ಉದ್ಯೋಗಾವಕಾಶ ಪತ್ರಗಳನ್ನು ಪಡೆದಿರುತ್ತಾರೆ.<br><br>ಡಿಡಿಯು-ಜಿಕೆವೈ ಕಾರ್ಯಕ್ರಮದಡಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಉದ್ಯೋಗಕ್ಕೆ ನೇಮಕಗೊಂಡಿರುವ ಯುವಜನರ ವಿವರ ಈ ಕೆಳಕಂಡಂತಿದೆ.<br><br>
<table>
<tr><th>ವರ್ಷ</th><th>2022-23</th><th>2023-24</th><th>2024-25</th><th>ಒಟ್ಟು</th></tr>
<tr><td>ಉದ್ಯೋಗಕ್ಕೆ ನೇಮಕಗೊಂಡ ಅಭ್ಯರ್ಥಿಗಳ ಸಂಖ್ಯೆ</td><td>598</td><td>367</td><td>756</td><td>1721</td></tr>
</table>
<br>ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿ.ಟಿ.ಟಿ.ಸಿ) ಸಂಸ್ಥೆಯ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.</td></tr>
<tr><td>(ಇ) ಆಂಗ್ಲ ಭಾಷೆ ಕಂಪ್ಯೂಟರ್ ಕೌಶಲ್ಯ, ಸಂಖ್ಯಾ ಕೌಶಲ್ಯ ಮತ್ತು ವಿಮರ್ಶಾತ್ಮಕ ಚಿಂತನ (critical thinking) ಕೌಶಲ್ಯ ಹೆಚ್ಚಿಸಲು ರಾಜ್ಯದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು;</td><td>ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ವತಿಯಿಂದ 2024-25ನೇ ಸಾಲಿನ ಆಯವ್ಯಯ ಘೋಷಣೆಯ ಕಂಡಿಕೆ 219ರಂತೆ, ಸುಮಾರು 20,000 ವಿದ್ಯಾರ್ಥಿಗಳಿಗೆ (ಐಟಿಐ ವಿದ್ಯಾರ್ಥಿಗಳಿಗೆ) ತರಬೇತಿ ನೀಡಲು ಪ್ರತಿ ತರಬೇತಿದಾರರಿಗೆ ಅಂದಾಜಿಸಿರುವ ವೆಚ್ಚ ರೂ.2,500/- ಮತ್ತು ಈ ಉದ್ದೇಶಕ್ಕಾಗಿ</td></tr>
</table>

| | |
|---|---|
| | ರೂ.5.00ಕೋಟಿಗಳ ಅನುದಾನ ಹಂಚಿಕೆಯಾಗಿರುತ್ತದೆ. ಆಯವ್ಯಯ ಕಂಡಿಕೆಯ ಅನುಸಾರ ಉದ್ಯೋಗ ನಿಯುಕ್ತಿಗೆ ಅನುಕೂಲವಾಗುವಂತೆ ಆಂಗ್ಲ ಮತ್ತು ಸಂವಹನ ಕೌಶಲ್ಯ ತರಬೇತಿಯನ್ನು ಸರ್ಕಾರಿ ಐ.ಟಿ.ಐಗಳ ವಿದ್ಯಾರ್ಥಿಗಳಿಗೆ ನೀಡುವ ಕುರಿತು ಸರ್ಕಾರಿ ಆದೇಶ ಹೊರಡಿಸಲಾಗಿರುತ್ತದೆ. ಅದರಂತೆ ಆಂಗ್ಲ ಮತ್ತು ಸಂವಹನ ಕೌಶಲ್ಯ ತರಬೇತಿ ಸಂಬಂಧ ಟೆಂಡರನ್ನು ಆಹ್ವಾನಿಸಿ, M/s. Academy for Computer Training (Guj) Pvt. Ltd. Ahmedabad-380006 ರವರಿಗೆ ಕಾರ್ಯಾದೇಶ ನೀಡಲಾಗಿರುತ್ತದೆ. ಸದರಿಯವರು 218 ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ತರಬೇತಿಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದು, 17056 ತರಬೇತಿದಾರರಿಗೆ ಆಂಗ್ಲ ಮತ್ತು ಸಂವಹನ ಕೌಶಲ್ಯ ತರಬೇತಿಯನ್ನು ನೀಡಲಾಗಿರುತ್ತದೆ.<br><br>ಸಂಜೀವಿನಿ- ಕೆ.ಎಸ್.ಆರ್.ಎಲ್.ಪಿ ಎಸ್ ಸಂಸ್ಥೆ ವತಿಯಿಂದ ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯ ತರಬೇತಿ ಕಾರ್ಯಕ್ರಮದ ಪಠ್ಯಕ್ರಮದ ಅನುಗುಣವಾಗಿ ಇಂಗ್ಲೀಷ್ ಭಾಷೆ, ಕಂಪ್ಯೂಟರ್ ಕೌಶಲ್ಯ, ಜೀವನ ಕೌಶಲ್ಯ, ಸಂಖ್ಯಾ ಕೌಶಲ್ಯ, ವಿಮರ್ಶಾತ್ಮಕ ಚಿಂತನೆ (Critical thinking) ಕೌಶಲ್ಯಗಳು ಸೇರಿದಂತೆ ತರಬೇತಿಯನ್ನು ನೀಡಲಾಗುತ್ತಿದೆ. ಪ್ರತಿ ಅಭ್ಯರ್ಥಿಗಳಿಗೆ 160 ಗಂಟೆಗಳ ಅವಧಿಯಲ್ಲಿ ಈ ಅವಶ್ಯಕ ವಿಷಯಗಳ ಕುರಿತಾದ ಜ್ಞಾನ ಮತ್ತು ಕೌಶಲ್ಯ ತರಬೇತಿಗಳನ್ನು ಒದಗಿಸಲಾಗುತ್ತಿದೆ. |
| (ಈ) ಕೌಶಲ್ಯಗಳನ್ನು ಸುಧಾರಿಸಲು ಪರಿಣಾಮಕಾರಿಯಾಗಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; | ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ವತಿಯಿಂದ ಕೌಶಲ್ಯಗಳನ್ನು ಸುಧಾರಿಸಲು ಪರಿಣಾಮಕಾರಿಯಾಗಿಸುವ ನಿಟ್ಟಿನಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br><br>1. ಕೌಶಲ್ಯ ನೀತಿ: ಕೌಶಲ್ಯಾಭಿವೃದ್ಧಿಯ ಪ್ರಕ್ರಿಯೆಗಳನ್ನು ಏಕರೂಪಗೊಳಿಸುವ ನಿಟ್ಟಿನಲ್ಲಿ ಎಲ್ಲಾ ಭಾಗಿದಾರರನ್ನು ಒಳಗೊಂಡಂತೆ ನೀತಿಯನ್ನು ರೂಪಿಸಲಾಗುತ್ತಿದೆ.<br>2. ಸಿ.ಎಂ.ಕೆ.ಕೆ.ವೈ 2.0: ಯೋಜನೆಯನ್ನು ಪರಿಣಾಮಕಾರಿಯಾಗಿ ಹಾಗೂ ತ್ವರಿತವಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಆಯವ್ಯಯ ಘೋಷಣೆಯಂತೆ ಕ್ರಮವಹಿಸಲಾಗುತ್ತಿದೆ.<br>3. Industry Linkage Cell ಮತ್ತು Future Skills: ಯುವಕರಿಗೆ ಭವಿಷ್ಯದ ಕೌಶಲ್ಯ (Future Skills) ತರಬೇತಿಗಳನ್ನು ಕೈಗಾರಿಕಾ ಆಧಾರಿತ ಬೇಡಿಕೆಯನುಸಾರ ನೀಡುವುದು ಹಾಗೂ ಉದ್ಯೋಗಾವಕಾಶ ಒದಗಿಸುವುದು.<br>4. ಕರ್ನಾಟಕ ಸ್ಕಿಲ್ ಒಲಂಪಿಕ್ಸ್: ಅಂತರಾಷ್ಟ್ರೀಯ ಕೌಶಲ್ಯ ಸ್ಪರ್ಧೆಗೆ ಹಾಗೂ ರಾಷ್ಟ್ರೀಯ ಕೌಶಲ್ಯ ಸ್ಪರ್ಧೆಗೆ ಪೂರಕವಾಗಿ ಕೌಶಲ್ಯ ಒಲಂಪಿಕ್ಸ್ ಮೂಲಕ ರಾಜ್ಯದ ಯುವಜನತೆಗೆ ಸ್ಪರ್ಧೆಯಲ್ಲಿ ಭಾಗವಹಿಸಲು ಪ್ರೇರೇಪಿಸುವುದು.<br>5. ವಿದೇಶಿ ಭಾಷಾ ತರಬೇತಿ: ಅಂತರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಉದ್ಯೋಗಾವಕಾಶಗಳನ್ನು ಪಡೆಯಲು ಜರ್ಮನ್, ಇಂಗ್ಲೀಷ್, ಸ್ಪ್ಯಾನಿಷ್ ಹಾಗೂ ಇತರೆ ಭಾಷೆಗಳಲ್ಲಿ ತರಬೇತಿ ನೀಡಲು ಕ್ರಮವಹಿಸಲಾಗುತ್ತಿರುತ್ತದೆ.<br>6. ಕಲಿಕೆ ಜೊತೆ ಕೌಶಲ್ಯ: ಪದವಿ ತರಗತಿಗಳಲ್ಲಿ ಕೌಶಲ್ಯ ಸುಧಾರಿತ ಕಲಿಕೆ ಜೊತೆ ಕೌಶಲ್ಯ ಕಾರ್ಯಕ್ರಮದಡಿ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ 50 ಗಂಟೆಗಳ ಕೈಗಾರಿಕಾ ಆಧಾರಿತ ತರಬೇತಿ ನೀಡಲಾಗುತ್ತಿದೆ. |

| | |
|---|---|
| | ಸಂಜೀವಿನಿ- ಕೆ.ಎಸ್.ಆರ್.ಎಲ್.ಪಿ ಎಸ್ ಸಂಸ್ಥೆ ವತಿಯಿಂದ ರಾಜ್ಯದಲ್ಲಿ ಡಿಡಿಯು-ಜಿಕೆವೈ ಕಾರ್ಯಕ್ರಮದಡಿ ಒದಗಿಸಲಾಗುವ ಕೌಶಲ್ಯ ಆಧಾರಿತ ತರಬೇತಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸಲು ಎಲ್ಲಾ ಹಂತಗಳಲ್ಲೂ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಚಟುವಟಿಕೆಯನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗುತ್ತಿದೆ.<br><br>ಮುಂದುವರೆದು, ಯೋಜನೆಯಡಿ CXO-Alumini Meet ಆಯೋಜನೆ ಮತ್ತು ಉತ್ತಮ ಅಭ್ಯಾಸಗಳ ಪ್ರಕಟಣೆ, IEC ಚಟುವಟಿಕೆಗಳು ಹಾಗೂ ಆಸಕ್ತ ಯುವಜನರೊಂದಿಗೆ ಸಂವಾದ ಮುಂತಾದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಮೂಲಕ ಕೌಶಲ್ಯ ಸುಧಾರಣೆಗೆ ನಿರಂತರ ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ಕೌಉಜೀಇ 30 ಕೌಗುಪ್ರ 2025

(ಡಾ. ಶರಣಪ್ರಕಾಶ ಆರ್ ಪಾಟೀಲ್)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ
ಸಚಿವರು.

## ಅನುಬಂಧ

| ಕಳೆದ 3 ವರ್ಷಗಳಲ್ಲಿ ಉದ್ಯೋಗಕ್ಕೆ ನಿಯೋಜಿಸಿದ ವಿವರಗಳು | | | | |
|---|---|---|---|---|
| **Sl. No.** | **Centres** | **2022-23** | **2023-24** | **2024-25** |
| 1 | Bengaluru | 137 | 129 | 90 |
| 2 | Mysore | 81 | 58 | 43 |
| 3 | Hassan | 67 | 33 | 37 |
| 4 | Mangaluru | 42 | 22 | 25 |
| 5 | Kalburgi | 67 | 71 | 57 |
| 6 | Belagavi | 67 | 68 | 59 |
| 7 | Dandeli | 62 | 45 | 45 |
| 8 | Hosapete | 50 | 22 | 14 |
| 9 | Dharwad | 81 | 65 | 43 |
| 10 | Harihar | 52 | 54 | 44 |
| 11 | Kudalasangama | 48 | 42 | 44 |
| 12 | Maddur | 46 | 39 | 29 |
| 13 | Kanakapura | 42 | 43 | 35 |
| 14 | Lingasugur | 32 | 15 | 19 |
| 15 | Gundlupet | 44 | 37 | 24 |
| 16 | Kadur | 34 | 25 | 18 |
| 17 | Humnabad | 43 | 46 | 31 |
| 18 | Kolar | 31 | 12 | 27 |
| 19 | Tumakuru | 37 | 28 | 30 |
| 20 | Shivamogga | 52 | 15 | 24 |
| 21 | Chikkodi | 41 | 14 | 28 |
| 22 | Gowribidanur | 54 | 50 | 40 |
| 23 | Gokak | 0 | 39 | 26 |
| 24 | Udupi | 0 | 50 | 80 |
| 25 | Challakere | 0 | 0 | 72 |
| 26 | Chitradurga | 0 | 0 | 35 |
| 27 | Koppal | 0 | 0 | 43 |
| 28 | Yadgir | 0 | 0 | 51 |
| **Total** | | **1210** | **1022** | **1113** |

Padma. S

(ಪದ್ಮ ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ